ಕರ್ನಾಟಕ ಸರ್ಕಾರ

**ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ ಮಲ್ಲೇಶ್ವರಂ, ಬೆಂಗಳೂರು-560003**

ಸಂಖ್ಯೆ: ವಿ1/ವಿಸಪ/ಅ.ಸೂ/01/2020 ದಿನಾಂಕ:14-02-2020

# ಅಧಿಸೂಚನೆ

**ವಿಷಯ:** 2020ನೇ ಮೇ-ಮಾಹೆಯಲ್ಲಿ ನಡೆಯಲಿರುವ ವಿಶೇಷ ಸಂಗೀತ/ನೃತ್ಯ ಮತ್ತು ತಾಳವಾದ್ಯ ಪರೀಕ್ಷೆಗಳಿಗೆ ಅಭ್ಯರ್ಥಿಗಳಿಂದ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ

**ಉಲ್ಲೇಖ:** 1)ಸರ್ಕಾರಿ ಆದೇಶ ಸಂಖ್ಯೆ :ಇಡಿ-30 ಎಸ್.ಎಲ್.ಬಿ.2011 ದಿನಾಂಕ:01.10.2012

2)ಸರ್ಕಾರಿ ಆದೇಶ ಸಂಖ್ಯೆ: ಇಡಿ-32 ಎಸ್.ಎಲ್.ಬಿ 2013 ದಿನಾಂಕ 25.03.2013

3)ಸರ್ಕಾರಿ ಆದೇಶ ಸಂಖ್ಯೆ:ಇಡಿ-299 ಎಸ್.ಎಲ್.ಬಿ 2011,ದಿನಾಂಕ: 08.07.2013

4)ಸರ್ಕಾರದ ಆದೇಶ: ಸಂಖ್ಯೆ: ಇಡಿ 299 ಎಸ್.ಎಲ್.ಬಿ 2011(ಭಾಗ), ದಿನಾಂಕ: 07.05.2015

5)ಆಯುಕ್ತರು, ಸಾ.ಶಿ.ಇಲಾಖೆ ಮತ್ತು ಅಧ್ಯಕ್ಷರು, ಕ.ಪ್ರೌ.ಶಿ.ಪ.ಮಂಡಳಿ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:02-01.2019 ರಂದು ನಡೆದ ಸಭಾ ನಡಾವಳಿ.

*******

ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯಲ್ಲಿ ಮೇ-2020ನೇ ಮಾಹೆಯಲ್ಲಿ ನಡೆಸಲಿರುವ ಶಾಸ್ತ್ರೀಯ ಸಂಗೀತ (ಕರ್ನಾಟಕ/ಹಿಂದೂಸ್ಥಾನಿ) ಭರತನಾಟ್ಯ, ಕೂಚಿಪುಡಿ, ಕಥಕ್, ಮತ್ತು ತಾಳವಾದ್ಯ (ಕರ್ನಾಟಕ/ಹಿಂದೂಸ್ಥಾನಿ) ಪರೀಕ್ಷೆಗಳಿಗೆ ಅಭ್ಯರ್ಥಿಗಳಿಂದ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪರೀಕ್ಷೆಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ, ನಿಗದಿತ ಪರೀಕ್ಷಾ ಶುಲ್ಕ ಮುಂತಾದ ವಿವರಗಳನ್ನು ಈ ಅಧಿಸೂಚನೆಯಲ್ಲಿ ಕೆಳಗೆ ನೀಡಲಾದ ನಿಯಮಗಳನ್ವಯ ಕ್ರಮಕೈಗೊಳ್ಳಲು ತಿಳಿಸಲಾಗಿದೆ.

ಮೇ-2020 ಮಾಹೆಯಲ್ಲಿ ಕಿರಿಯದರ್ಜೆ, ಹಿರಿಯದರ್ಜೆ, ವಿದ್ವತ್‌ಪೂರ್ವ ಮತ್ತು ವಿದ್ವತ್ ಅಂತಿಮ ಸಂಗೀತ, ನೃತ್ಯ ಮತ್ತು ತಾಳವಾದ್ಯ ಪರೀಕ್ಷೆಗಳನ್ನು ನಡೆಸಲಾಗುವುದು. ಉಲ್ಲೇಖ(1)ರ ಸರ್ಕಾರದ ಆದೇಶದಂತೆ ಈ ಹಿಂದೆ 2019ರ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು ಮತ್ತೆ ಪರೀಕ್ಷೆ ಬರೆಯಲು ಇಚ್ಛಿಸಿದಲ್ಲಿ ಮೇ-2020ರ ಮಾಹೆಯಲ್ಲಿ ನಡೆಯಲಿರುವ ಪರೀಕ್ಷೆಯಲ್ಲಿ ಯಾವುದೇ ಲಿಖಿತ ಪರೀಕ್ಷೆಯ ಪತ್ರಿಕೆಗಳಾದ ಶಾಸ್ತ್ರಪತ್ರಿಕೆ ಮತ್ತು ಶ್ರವಣಜ್ಞಾನ/ದೃಶ್ಯಜ್ಞಾನ ಪತ್ರಿಕೆ ಬರೆಯಲು ಅವಕಾಶ ಕಲ್ಪಿಸಲಾಗಿದೆ ಹಾಗೂ ಯಾವುದಾದರೂ ಒಂದು ಪ್ರಾಯೋಗಿಕ ಪತ್ರಿಕೆಯಲ್ಲಿ ಅನುತ್ತೀರ್ಣರಾಗಿದ್ದರು ಸಹ ಎಲ್ಲಾ ಪ್ರಾಯೋಗಿಕ ಪತ್ರಿಕೆಗಳಿಗೆ ಪರೀಕ್ಷೆ ತೆಗೆದುಕೊಳ್ಳಬೇಕಾಗುತ್ತದೆ. ಈ ಸೌಲಭ್ಯ 2012ನೇ ಸಾಲಿನಿಂದ ಅನುತ್ತೀರ್ಣರಾದ ಅಭ್ಯರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ. ಅದಕ್ಕೂ ಹಿಂದೆ ಅನುತ್ತೀರ್ಣರಾದ ಅಭ್ಯರ್ಥಿಗಳು ಒಂದು ವಿಷಯದ ಲಿಖಿತ ಅಥವಾ ಪ್ರಾಯೋಗಿಕ ಒಂದು ವಿಷಯದಲ್ಲಿ ಅನುತ್ತೀರ್ಣರಾಗಿದ್ದರೂ ಎಲ್ಲಾ ವಿಷಯಗಳಿಗೂ ಪರೀಕ್ಷೆ ತೆಗೆದುಕೊಳ್ಳಬೇಕಾಗಿದ್ದು, ಆನ್‌ಲೈನ್ ಮುಖಾಂತರ ಪರೀಕ್ಷಾ ಅರ್ಜಿ ಸಲ್ಲಿಸಬೇಕು.

2012ನೇ ಸಾಲಿನಿಂದ ಇಲ್ಲಿಯವರೆಗೆ ಅನುತ್ತೀರ್ಣರಾದ ಎಲ್ಲಾ ಅಭ್ಯರ್ಥಿಗಳಿಗೆ MSA(MARKS STATEMENT-CUM-APPLICATION)ಅನ್ನು ಪರೀಕ್ಷಾ ಕೇಂದ್ರಗಳಿಗೆ ಕಳುಹಿಸಲಾಗಿದೆ. MSAಯ ಪುಟ 1ರಲ್ಲಿ ಅಭ್ಯರ್ಥಿಯ ವಿವರ ಹಾಗೂ ಗಳಿಸಿದ ಅಂಕಗಳ ವಿವರ ಇರುತ್ತದೆ. ಈ ಅಭ್ಯರ್ಥಿಗಳು ಸಹ ಮೇ-2020 ರಲ್ಲಿ ನಡೆಯುವ ಪರೀಕ್ಷೆಗೆ ಮಂಡಳಿಯ ಜಾಲತಾಣ ವಿಳಾಸ www.kseeb.kar.nic.in ಮುಖಾಂತರ ಆನ್‌ಲೈನ್ ಅರ್ಜಿ ಸಲ್ಲಿಸಬೇಕು.

**ವಿಶೇಷ ಸಂಗೀತ ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆ ತೆಗೆದುಕೊಳ್ಳಲು ಅಗತ್ಯವಿರುವ ಅರ್ಹತೆ :-**

- ಪಠ್ಯಕ್ರಮದಂತೆ ಕಿರಿಯ ದರ್ಜೆ ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳಿಗೆ ದಿನಾಂಕ 01-03-2020ಕ್ಕೆ 10 ವರ್ಷ ತುಂಬಿರಬೇಕು. ಈ ಸಂಬಂಧ ಜನನ ಪ್ರಮಾಣಪತ್ರ/ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ದೃಢೀಕರಿಸಿದ, ಶಾಲಾ ಮುಖ್ಯಸ್ಥರಿಂದ ಪಡೆದ ಮೂಲ ದಾಖಲೆಯ ಉದ್ಧೃತ ಪ್ರತಿ /ವರ್ಗಾವಣೆ ಪತ್ರದ ದೃಢೀಕರಿಸಿದ ಜೆರಾಕ್ಸ್ ಪ್ರತಿ/

ಎಸ್.ಎಸ್.ಎಲ್.ಸಿ ಪರೀಕ್ಷೆಯ ಅಂಕಪಟ್ಟಿಯನ್ನು ಅರ್ಜಿಯ ಜೊತೆ ಕಡ್ಡಾಯವಾಗಿ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲು ತಿಳಿಸಿದೆ.

- ಪಠ್ಯಕ್ರಮದಂತೆ ಹಿರಿಯ ದರ್ಜೆಗೆ ಅರ್ಜಿ ಸಲ್ಲಿಸಲು ಕಿರಿಯ ದರ್ಜೆಯಲ್ಲಿ ಉತ್ತೀರ್ಣರಾಗಿ ಮೂರು ವರ್ಷ ಆಗಿರಬೇಕು ಅಥವಾ ಸರ್ಕಾರದ ಆದೇಶ ಸಂಖ್ಯೆ ಇಡಿ–195–ಡಿಜಿಒ–2004 ಬೆಂಗಳೂರು, ದಿನಾಂಕ 15–01–2005ರಂತೆ **ದಿನಾಂಕ:**1–03–2020ಕ್ಕೆ ಸರಿಯಾಗಿ 17 ವರ್ಷ ತುಂಬಿದ್ದು, ಅಭ್ಯರ್ಥಿಯು ಸಂಗೀತ/ನೃತ್ಯ/ತಾಳವಾದ್ಯ ವಿಷಯಗಳನ್ನು ಐಚ್ಛಿಕವಾಗಿ ವ್ಯಾಸಂಗ ಮಾಡಿ ಪದವಿಪೂರ್ವ(ಪಿ.ಯು.ಸಿ) ಶಿಕ್ಷಣ ಇಲಾಖೆ ನಡೆಸುವ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದರೆ ನೇರವಾಗಿ ಹಿರಿಯ ದರ್ಜೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿದೆ.
- ಯಾವುದೇ ಹಿರಿಯ ದರ್ಜೆಯ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಕಿರಿಯ ದರ್ಜೆಯ ಪರೀಕ್ಷಾ ನೋಂದಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿ ಅರ್ಜಿ ಸಲ್ಲಿಸಬೇಕು.
- ವಿದ್ವತ್‌ಪೂರ್ವ ದರ್ಜೆಗೆ ಅರ್ಜಿ ಸಲ್ಲಿಸಲು **ಹಿರಿಯ ದರ್ಜೆಯಲ್ಲಿ ಉತ್ತೀರ್ಣರಾಗಿ 3 ವರ್ಷಗಳಾಗಿರಬೇಕು** ಅಥವಾ ದಿನಾಂಕ 01–03–2020ಕ್ಕೆ 19 ವರ್ಷ ಪೂರ್ಣಗೊಂಡಿರುವ ವಿದ್ಯಾರ್ಥಿಯು ಸಂಗೀತ/ನೃತ್ಯ/ತಾಳವಾದ್ಯ ವಿಷಯಗಳನ್ನು ಐಚ್ಛಿಕವಾಗಿ ತೆಗೆದುಕೊಂಡು ಬಿ.ಎ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರೆ ವಿದ್ವತ್‌ಪೂರ್ವ ಪರೀಕ್ಷೆ ನೇರವಾಗಿ ತೆಗೆದುಕೊಳ್ಳಬಹುದು.
- ವಿದ್ವತ್‌ಪೂರ್ವ ಪರೀಕ್ಷೆ ಉತ್ತೀರ್ಣರಾದ ಒಂದು ವರ್ಷದ ನಂತರ ವಿದ್ವತ್‌ಅಂತಿಮ ಪರೀಕ್ಷೆ ತೆಗೆದುಕೊಳ್ಳಬಹುದು.
- ಹೊಸ ಪಠ್ಯಕ್ರಮದ ಮೊದಲು ಪ್ರಾಯೋಗಿಕ ಪರೀಕ್ಷೆ ತೇರ್ಗಡೆಯಾಗಿ ನಂತರದ ವರ್ಷದಲ್ಲಿ ಶಾಸ್ತ್ರ ಪರೀಕ್ಷೆಗೆ ಹಾಜರಾಗಲು ಅವಕಾಶವಿರುವುದಿಲ್ಲ. ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ಪಠ್ಯಕ್ರಮದಂತೆ ಅಭ್ಯರ್ಥಿಗಳು ಯಾವುದೇ ಒಂದು ದರ್ಜೆಯ(ಗ್ರೇಡ್) ಹಾಡುಗಾರಿಕೆ ಜೊತೆಯಲ್ಲಿ ವಾದ್ಯಸಂಗೀತ ಪರೀಕ್ಷೆಗಳಿಗೆ ಒಂದು ಬಾರಿಗೆ ಕುಳಿತುಕೊಳ್ಳಬಹುದು. ಆದರೆ ಸದರಿ ಪರೀಕ್ಷೆಗಳಿಗೆ ಪ್ರತ್ಯೇಕ ಅರ್ಜಿಯನ್ನು ಪರೀಕ್ಷಾ ಶುಲ್ಕದೊಡನೆ ಕಟ್ಟಿರಬೇಕು.
- ಯಾವುದೇ ಕಾರಣದಿಂದಲೂ ಒಬ್ಬ ಅಭ್ಯರ್ಥಿ ಬೇರೆ ಬೇರೆ ದರ್ಜೆಯ (ಗ್ರೇಡ್) ಹಾಡುಗಾರಿಕೆ ಹಾಗೂ ವಾದ್ಯಸಂಗೀತ ಪರೀಕ್ಷೆಗಳಿಗೆ ಒಂದೇ ವರ್ಷದಲ್ಲಿ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ. ಅಂತೆಯೇ ಹಾಡುಗಾರಿಕೆ ಅಥವಾ ವಾದ್ಯ ಸಂಗೀತದ ಪರೀಕ್ಷೆಯೊಂದಿಗೆ ತಾಳವಾದ್ಯ ಮತ್ತು ನೃತ್ಯದ ಪರೀಕ್ಷೆಗಳಿಗೆ ಜೊತೆಯಲ್ಲಿಯೇ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ.

## ಪರೀಕ್ಷಾ ಶುಲ್ಕದ ವಿವರ:–

**2020ರಲ್ಲಿ ಪ್ರಥಮ ಬಾರಿಗೆ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳ ಶುಲ್ಕದ ವಿವರ**

| ಕ್ರಮ ಸಂಖ್ಯೆ | ಪರೀಕ್ಷೆಯ ಹೆಸರು | ಅರ್ಜಿ ಶುಲ್ಕ | ಪರೀಕ್ಷಾ ಶುಲ್ಕ ರೂ | ಅಂಕಪಟ್ಟಿ ಲ್ಯಾಮಿನೇಷನ್ ಶುಲ್ಕ | ಒಟ್ಟು |
|---|---|---|---|---|---|
| 1 | ಕಿರಿಯ ದರ್ಜೆ (Junior) | 100.00 | 1264–00 | 45–00 | 1409 |
| 2 | ಹಿರಿಯ ದರ್ಜೆ (Senior) | 100.00 | 1420–00 | 45–00 | 1565 |
| 3 | ವಿದ್ವತ್‌ಪೂರ್ವ (pre Vidwat) | 100.00 | 1575–00 | 45–00 | 1720 |
| 4 | ವಿದ್ವತ್‌ಅಂತಿಮ (Vidwat Final) | 100.00 | 1654–00 | 45–00 | 1799 |

* ಎಸ್.ಸಿ/ಎಸ್.ಟಿ ಮತ್ತು ಅಂಧ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ರೂ 10/-,ಅಂಕಪಟ್ಟಿ ಶುಲ್ಕ ರೂ.20/-, ಅಂಕಪಟ್ಟಿ ಲ್ಯಾಮಿನೇಷನ್ ಶುಲ್ಕ ರೂ.25/- ,ಅರ್ಜಿ ಶುಲ್ಕ- 100ಗಳು ಒಟ್ಟು ರೂ.155/- ಪಾವತಿಸಬೇಕಾಗಿರುತ್ತದೆ.

**ಅನುತ್ತೀರ್ಣರಾದ ಅಭ್ಯರ್ಥಿಗಳ ಶುಲ್ಕದ ವಿವರ**

| ಕ್ರಮ ಸಂಖ್ಯೆ | ಪರೀಕ್ಷೆಯ ಹೆಸರು | (ಥಿಯರಿ-1) | (ಥಿಯರಿ-2) | ಶ್ರವಣ/ದೃಶ್ಯಜ್ಞಾನ | ಎಲ್ಲಾ ಪ್ರಾಯೋಗಿಕ ವಿಷಯಗಳು ಸೇರಿದಂತೆ |
|---|---|---|---|---|---|
| 1 | ಕಿರಿಯ ದರ್ಜೆ (Junior) | 300 | – | 244 | 720 |
| 2 | ಹಿರಿಯ ದರ್ಜೆ (Senior) | 320 | 320 | – | 780 |
| 3 | ವಿದ್ವತ್‌ಪೂರ್ವ (pre Vidwat) | 368 | 368 | – | 840 |
| 4 | ವಿದ್ವತ್‌ಅಂತಿಮ (Vidwat Final) | 377 | 377 | – | 900 |

* ಈ ಮೇಲ್ಕಂಡ ನಮೂನೆಯಲ್ಲಿ ಪತ್ರಿಕೆವಾರು ವಿಷಯಗಳಿಗೆ ನಿಗದಿಪಡಿಸಿರುವ ಶುಲ್ಕವನ್ನು ಪಾವತಿಸಬೇಕಾಗಿದೆ.
* ಅನುತ್ತೀರ್ಣರಾದ ಎಸ್.ಸಿ/ಎಸ್.ಟಿ ಮತ್ತು ಅಂಧ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ರೂ.10/-, ಅಂಕಪಟ್ಟಿ ಶುಲ್ಕ ರೂ 20/- ಮತ್ತು ಅಂಕಪಟ್ಟಿ ಲ್ಯಾಮಿನೇಷನ್ ಶುಲ್ಕ ರೂ 25/- ಒಟ್ಟು ರೂ 55/- ಪಾವತಿಸಬೇಕಾಗಿರುತ್ತದೆ.
* ಒಬ್ಬ ಅಭ್ಯರ್ಥಿ ಒಂದು ಥಿಯರಿ (ಲಿಖಿತ) ಪರೀಕ್ಷೆಯಲ್ಲಿ ಅನುತ್ತೀರ್ಣರಾದರೆ ಆ ಪತ್ರಿಕೆ ಮಾತ್ರ ಪರೀಕ್ಷೆ ತೆಗೆದುಕೊಳ್ಳಬೇಕು.
* ಅಭ್ಯರ್ಥಿ ಒಂದು ಪ್ರಾಯೋಗಿಕ ಪರೀಕ್ಷೆಯಲ್ಲಿ ಅನುತ್ತೀರ್ಣರಾದರೆ ಎಲ್ಲಾ ಪ್ರಾಯೋಗಿಕ ಪರೀಕ್ಷೆ ತೆಗೆದುಕೊಳ್ಳುವುದು ಕಡ್ಡಾಯವಾಗಿತ್ತದೆ.
* ಪರಿಶಿಷ್ಟಜಾತಿ/ ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕದ ವಿನಾಯಿತಿ ಇದೆ. ಪರೀಕ್ಷಾ ಶುಲ್ಕದಿಂದ ವಿನಾಯಿತಿ ಪಡೆಯಲು ಈ ವರ್ಗದ ಅಭ್ಯರ್ಥಿಗಳು ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದ ಮೂಲ ಜಾತಿ ಪ್ರಮಾಣ ಪತ್ರದ ಆರ್.ಡಿ ನಂಬರ್‌ನನ್ನು ಆನ್‌ಲೈನ್‌ನಲ್ಲಿ ದಾಖಲಿಸಬೇಕು ನಂತರ ಭರ್ತಿ ಮಾಡಿದ ಅರ್ಜಿ ಪ್ರಿಂಟ್ ತೆಗೆದುಕೊಂಡು ಅದರೊಂದಿಗೆ ಜಾತಿ ಪ್ರಮಾಣ ಪತ್ರದ ದೃಡೀಕೃತ ನಕಲು ಪ್ರತಿಯನ್ನು ಲಗತ್ತಿಸಿ ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ನೀಡಬೇಕು. ಕೇಂದ್ರದ ಮುಖ್ಯಸ್ಥರು ಮೂಲ ಜಾತಿ ಪ್ರಮಾಣ ಪತ್ರವನ್ನು ಪರಿಶೀಲಿಸಿ ಅನುಮೋದನೆ ಮಾಡಿ, ದೃಢೀಕೃತ ಪ್ರಮಾಣಪತ್ರವನ್ನು ಕೇಂದ್ರದಲ್ಲಿ ಇಟ್ಟುಕೊಂಡು ಮೂಲ ಪ್ರಮಾಣಪತ್ರವನ್ನು ವಿದ್ಯಾರ್ಥಿಗೆ ಹಿಂದಿರುಗಿಸುವುದು.
* ಅಂಧ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿ ನೀಡಲಾಗುತ್ತದೆ. ಇಂತಹ ವಿದ್ಯಾರ್ಥಿಗಳು ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ಮೂಲ ಪ್ರಮಾಣ ಪತ್ರವನ್ನು ಸ್ಕ್ಯಾನ್ ಮಾಡಿ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಬೇಕು ನಂತರ ಸದರಿ ನಕಲು ಪ್ರಮಾಣ ಪತ್ರವನ್ನು ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿ ಅರ್ಜಿಯೊಂದಿಗೆ ಲಗತ್ತಿಸಿ ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ನೀಡಬೇಕು. ದೃಢೀಕೃತ ಪ್ರಮಾಣಪತ್ರವನ್ನು ಕೇಂದ್ರದಲ್ಲಿ ಇಟ್ಟುಕೊಂಡು ಮೂಲ ಪ್ರಮಾಣಪತ್ರವನ್ನು ವಿದ್ಯಾರ್ಥಿಗೆ ಹಿಂದಿರುಗಿಸುವುದು. ಪ್ರಮಾಣ ಪತ್ರ ಇಲ್ಲವಾದಲ್ಲಿ ಅಂತಹ ಅರ್ಜಿಗಳನ್ನು ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಅನುಮೋದನೆ ಮಾಡುವ ಸಂದರ್ಭದಲ್ಲಿ ತಿರಸ್ಕರಿಸುವುದು.
* ಆನ್‌ಲೈನ್/ಚಲನ್ ಮೂಲಕ ಪರೀಕ್ಷಾ ಶುಲ್ಕದ ಹಣ ಪಾವತಿಸಿ ನಂತರ ಚಲನ್ ಪ್ರಿಂಟ್ ತೆಗೆದುಕೊಂಡು ನಿಗಧಿತ ಪರೀಕ್ಷಾ ಕೇಂದ್ರಗಳಿಗೆ ಅರ್ಜಿಯೊಂದಿಗೆ ಸಲ್ಲಿಸಬೇಕು.

**ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ನಂತರ ಈ ಕೆಳಕಂಡ ದಾಖಲೆಗಳನ್ನು ನಿಗಧಿಪಡಿಸಿರುವ ಪರೀಕ್ಷಾ ಕೇಂದ್ರಗಳಿಗೆ ಕಡ್ಡಾಯವಾಗಿ ಸಲ್ಲಿಸಿ, ಪರೀಕ್ಷಾ ಕೇಂದ್ರದ ಮುಖ್ಯಸ್ಥರುಗಳಿಂದ ಪರಿಶೀಲಿಸಿ ಅನುಮೋದನೆ ಪಡೆಯಬೇಕು.**

- ಆನ್‌ಲೈನ್‌ನಲ್ಲಿ ಭರ್ತಿ ಮಾಡಿರುವ ಅರ್ಜಿ
- ವಯಸ್ಸಿನ ಬಗ್ಗೆ ದೃಡೀಕರಣಕ್ಕಾಗಿ Online ಅಲ್ಲಿ upload ಮಾಡಿದ ದಾಖಲೆಗಳಾದ ಜನನ ಪ್ರಮಾಣ ಪತ್ರದ ಪ್ರತಿ/ಎಸ್.ಎಸ್.ಎಲ್.ಸಿ ಅಂಕಪಟ್ಟಿ/ ಶಾಲಾ ಮುಖ್ಯಸ್ಥರಿಂದ ಪಡೆದ ದಾಖಲಾತಿ ವಹಿಯ ಉಧೃತ ಭಾಗವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ದೃಢೀಕರಿಸಿದ ಮೂಲ ಪ್ರತಿ /ವರ್ಗಾವಣೆ ಪತ್ರದ ದೃಢೀಕರಿಸಿದ ಜೆರಾಕ್ಸ್ ಪ್ರತಿ ಹಾಗೂ ಒಂದು ಸೆಟ್ ನಕಲು ಪ್ರತಿಗಳು.
- ಅಂಧ ಅಭ್ಯರ್ಥಿಗಳು ತಾವು ಪಡೆದಿರುವ ಸಹಾಯಕರ ಅನುಮತಿಪತ್ರ, ಭಾವಚಿತ್ರ ಇತ್ಯಾದಿ ವಿವರ.
- ಎರಡು ವಿಷಯಗಳನ್ನು ಪರೀಕ್ಷೆ ತೆಗೆದುಕೊಂಡಿರುವ ಅಭ್ಯರ್ಥಿಗಳು ತಾವು ತೆಗೆದುಕೊಂಡಿರುವ ವಿಷಯಗಳ ಬಗ್ಗೆ ಕಡ್ಡಾಯವಾಗಿ ಕೇಂದ್ರದ ಮುಖ್ಯಸ್ಥರಿಗೆ ಮಾಹಿತಿ ನೀಡಬೇಕು.
- ಅಭ್ಯರ್ಥಿಗಳು ನಿಗದಿಪಡಿಸಿರುವ ಪರೀಕ್ಷಾ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸಿರುವ ಬಗ್ಗೆ Acknowledgement ಪ್ರತಿ ಅಥವಾ ಬ್ಯಾಂಕ್ ಚಲನ್ ಮುದ್ರಿಸಿಕೊಂಡು ಕಾರ್ಪೋರೇಷನ್ ಬ್ಯಾಂಕ್ ಮುಖಾಂತರ ಶುಲ್ಕ ಪಾವತಿಸಿರುವ ಮೂಲ ಚಲನ್ ಸಲ್ಲಿಸಬೇಕು.

**ಅಭ್ಯರ್ಥಿಗಳು ಅರ್ಜಿಗಳೊಂದಿಗೆ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕಗಳನ್ನು ಕೆಳಕಂಡಂತೆ ನಿಗದಿಪಡಿಸಿದೆ:-**

| ಕ್ರ.ಸಂ | ವಿವರ | ದಿನಾಂಕ |
|---|---|---|
| 1 | ಅಭ್ಯರ್ಥಿಗಳು ಮಂಡಳಿಯ ಜಾಲತಾಣದಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ | 24.02.2020 |
| 2 | ಮಂಡಳಿಯ ಜಾಲತಾಣದಲ್ಲಿ ಅಭ್ಯರ್ಥಿಗಳಿಂದ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ**(ದಂಡ ರಹಿತವಾಗಿ)** | 26.03.2020 |
| 3 | ಅಭ್ಯರ್ಥಿಗಳು ಮಂಡಳಿಯ ಜಾಲತಾಣದ ಮೂಲಕ ಆನ್‌ಲೈನ್ ಅಥವಾ ಬ್ಯಾಂಕ್ ಚಲನ್ ಮುದ್ರಿಸಿ ದಂಡ ರಹಿತವಾಗಿ ಪರೀಕ್ಷಾ ಶುಲ್ಕವನ್ನು ಬ್ಯಾಂಕ್‌ಗೆ ಪಾವತಿಸಲು ಕೊನೆಯ ದಿನಾಂಕ | 27.03.2020 |
| 4 | ದಂಡ ಶುಲ್ಕದೊಂದಿಗೆ ದಿನ ಒಂದಕ್ಕೆ ರೂ.150/-ಗಳೊಂದಿಗೆ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ | 31.03.2020 |
| 5 | ಅಭ್ಯರ್ಥಿಗಳು ದಂಡ ಸಹಿತವಾಗಿ ಮಂಡಳಿಯ ಜಾಲತಾಣದ ಮೂಲಕ ಆನ್‌ಲೈನ್ ಅಥವಾ ಬ್ಯಾಂಕ್ ಚಲನ್ ಮುದ್ರಿಸಿ ಪರೀಕ್ಷಾ ಶುಲ್ಕವನ್ನು ಬ್ಯಾಂಕ್‌ಗೆ ಪಾವತಿಸಲು ಕೊನೆಯ ದಿನಾಂಕ | 02.04.2020 |
| 06 | ಅಭ್ಯರ್ಥಿಗಳು ಪರೀಕ್ಷಾ ಅರ್ಜಿ ಸಲ್ಲಿಸದ ನಂತರ ಸಂಬಂಧಿಸಿದ ದಾಖಲೆಗಳು ಹಾಗೂ ಮೂಲ ಬ್ಯಾಂಕ್ ಚಲನ್ ಅನ್ನು ಆಯಾ ಪರೀಕ್ಷಾ ಕೇಂದ್ರ ಮುಖ್ಯಸ್ಥರಿಗೆ ಸಲ್ಲಿಸಲು ಕೊನೆಯ ದಿನಾಂಕ | 09.04.2020 |

- ಮೇಲ್ಕಂಡ ನಿಗಧಿಪಡಿಸಿದ ಕೊನೆಯ ದಿನಾಂಕದ ನಂತರ ಅಭ್ಯರ್ಥಿಗಳು ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.
- ಪರೀಕ್ಷಾ ಕೇಂದ್ರ ನಿಗಧಿಗೆ ಸಾಕಷ್ಟು ಅಭ್ಯರ್ಥಿಗಳು ದಾಖಲಾಗದಿದ್ದರೆ ಅಥವಾ ಇನ್ನಾವುದೇ ಕಾರಣಕ್ಕಾಗಲಿ ರಾಜ್ಯದ ಯಾವ ಪರೀಕ್ಷಾ ಕೇಂದ್ರವನ್ನಾದರೂ ರದ್ದು ಪಡಿಸಲು ಮಂಡಳಿಯು ಪೂರ್ಣ ಅಧಿಕಾರವನ್ನು ಹೊಂದಿದೆ. ಅಂತಹ ಕೇಂದ್ರಗಳಿಗೆ ನೋಂದಾಯಿಸಲ್ಪಡುವ ಅಭ್ಯರ್ಥಿಗಳನ್ನು ಹತ್ತಿರದ ಕೇಂದ್ರಗಳಿಗೆ ವರ್ಗಾಯಿಸಲಾಗುವುದು.

- ಅಭ್ಯರ್ಥಿಯು ಪರೀಕ್ಷಾ ಅರ್ಜಿ ಸಲ್ಲಿಸಿದ ನಂತರ ವಿಷಯ ಅಥವಾ ಕೇಂದ್ರ ಬದಲಾವಣೆಗೆ ಅವಕಾಶವಿರುವುದಿಲ್ಲ.
- ಅಭ್ಯರ್ಥಿಗಳು ಭಾವಚಿತ್ರ(60-80KB Size JPG Format),ಸಹಿ (20-50KB JPG Format), ಅಂಧ ಅಭ್ಯರ್ಥಿಗಳ ಪ್ರಮಾಣಪತ್ರ (upto1MB PDF Format), ಸಂಬಂಧಿಸಿದ ಪ್ರಮಾಣ ಪತ್ರಗಳು (upto1MB PDF Format), ಈ ಪ್ರಮಾಣದಲ್ಲಿ ಸ್ಕ್ಯಾನ್ ಮಾಡಿ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಬೇಕು.

**ವಿವಿಧ ಪರೀಕ್ಷೆಗಳಿಗೆ ಕೆಳಕಂಡ ವಾದ್ಯಗಳನ್ನು ಮಾತ್ರ ನಿಗಧಿಪಡಿಸಿದೆ.**

| | |
|---|---|
| ಅ) ಕರ್ನಾಟಕ ವಾದ್ಯ ಸಂಗೀತ | ವೀಣೆ/ಪಿಟೀಲು/ಕೊಳಲು/ನಾದಸ್ವರ/ಗೋಟುವಾದ/ಕ್ಲರಿಯೋನೆಟ್/ ಮ್ಯಾಂಡಲಿನ್/ಸ್ಯಾಕ್ಸ್‌ಫೋನ್ |
| ಆ) ಹಿಂದೂಸ್ತಾನಿ ವಾದ್ಯ ಸಂಗೀತ | ಪಿಟೀಲು/ಕೊಳಲು/ಬೀನ್/ಸಿತಾರ್/ಷಹನಾಯ್/ದಿಲ್‌ರುಬಾ/ಹಾರ್ಮೋನಿಯ/ ಮೋಹನ್‌ವೀಣಾ/ರುದ್ರವೀಣಾ/ಸಂತೂರ್/ಸರೋದ್/ಸಾರಂಗಿ |
| ಇ) ಕರ್ನಾಟಕ ತಾಳವಾದ್ಯ | ಮೃದಂಗ/ಖಂಜಿರ/ಘಟಂ/ಮೋರ್ಚಿಂಗ್/ಡೋಲ್/ಡೋಲಕ್ |
| ಈ) ಹಿಂದೂಸ್ತಾನಿ ತಾಳವಾದ್ಯ | ತಬಲ/ಪಕ್ವಾಜ್/ಡೋಲಕ್ |

**ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಮುಂಚೆ ಈ ಕೆಳಕಂಡ ಅಂಶಗಳನ್ನು ಗಮನಿಸತಕ್ಕದ್ದು**

- ಅರ್ಜಿ ಸಲ್ಲಿಸಲು ಇಚ್ಚಿಸುವ ಅಭ್ಯರ್ಥಿಗಳು ಜಿಲ್ಲೆಯಲ್ಲಿರುವ ಪರೀಕ್ಷಾ ಕೇಂದ್ರಗಳಲ್ಲಿ ನಡೆಯದೇ ಇರುವ ವಿಷಯಗಳಿಗೆ ಪ್ರಸ್ತುತ ನಿಗಧಿಪಡಿಸಿರುವ ಯಾವುದಾದರೂ ಹತ್ತಿರದ ಪರೀಕ್ಷಾ ಕೇಂದ್ರದ ಮೂಲಕ ಅರ್ಜಿ ಸಲ್ಲಿಸಬಹುದು.
- ಅಭ್ಯರ್ಥಿಗಳ ಪ್ರವೇಶ ಪತ್ರದಲ್ಲಿ ಮಂಡಳಿ ನಿಗಧಿ ಪಡಿಸುವ ಪರೀಕ್ಷಾ ಕೇಂದ್ರದ ವಿಳಾಸದಲ್ಲಿಯೇ ಶಾಸ್ತ್ರ ಪರೀಕ್ಷೆಗೆ ಹಾಗೂ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗತಕ್ಕದ್ದು.
- ಅಭ್ಯರ್ಥಿಗಳು ಪರೀಕ್ಷೆಯ ಪ್ರವೇಶ ಪತ್ರದಲ್ಲಿ ವಿದ್ಯಾರ್ಥಿ ಹೆಸರು, ಜನ್ಮದಿನಾಂಕ ಅಥವಾ ತಂದೆ ಇನ್ನಾಯ್ಯಾವುದೇ ವಿವರಗಳಲ್ಲಿ ತಿದ್ದುಪಡಿ ಬಯಸಿದ್ದಲ್ಲಿ ಸರಿಪಡಿಸಲು ಪ್ರತಿ ತಪ್ಪಿಗೆ **ರೂ 200/- ದಂಡ** ವಿಧಿಸಲಾಗುವುದು ಹಾಗೂ ಅರ್ಜಿ ಸರಿಪಡಿಸಲು ಎಸ್.ಎಸ್.ಎಲ್.ಸಿ ನಕಲು ಪ್ರತಿ ಅಥವಾ ಶಾಲಾ ದಾಖಲಾತಿ ಉದ್ಧೃತ ಪ್ರತಿಯು ಕ್ಷೇತ್ರಶಿಕ್ಷಣಾಧಿಕಾರಿಗಳಿಂದ ದೃಢೀಕೃತ ಕಡ್ಡಾಯವಾಗಿರುತ್ತದೆ. ಅಂತಹ ಅರ್ಜಿಗಳನ್ನು ಪರೀಕ್ಷಾ ಕೇಂದ್ರದ ಮುಖ್ಯಸ್ಥರ ಮುಖಾಂತರ ಮಂಡಳಿಗೆ ಸಲ್ಲಿಸುವುದು.
- ಶಾಸ್ತ್ರ ಹಾಗೂ ಪ್ರಾಯೋಗಿಕ ಪರೀಕ್ಷಾ ಸಮಯದಲ್ಲಿ ಪರೀಕ್ಷಾ ಕೇಂದ್ರಗಳಲ್ಲಿ ತಾಳ್ಮೆಯಿಂದಿದ್ದು, ಶಾಂತಿಯುತವಾದ ವಾತಾವರಣವನ್ನು ಕಾಪಾಡಲು ಪೋಷಕರಿಗೆ ತಿಳಿಸುವುದು. ಪರೀಕ್ಷೆಗಳು ಸುಗಮವಾಗಿ ಸಕಾಲಕ್ಕೆ ನಡೆಯಲು ಪರೀಕ್ಷಾ ಕೇಂದ್ರದ ಸಿಬ್ಬಂದಿಗೆ ಸಹಕಾರ ನೀಡುವುದು.

**ಅಂಧ ವಿದ್ಯಾರ್ಥಿಗಳಿಗೆ ವಿಶೇಷ ಸೂಚನೆ :-**

ಸಂಗೀತ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಅಂಧ ಅಭ್ಯರ್ಥಿಗಳು ಪರೀಕ್ಷೆ ಬರೆಯುವ ಸಹಾಯಕರ ಸಂಪೂರ್ಣ ವಿವರವನ್ನು ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ಸ್ವಯಂ ದೃಢೀಕರಣದೊಂದಿಗೆ ಪರೀಕ್ಷಾ ಅರ್ಜಿ ಸಲ್ಲಿಸಿದ 15 ದಿವಸದೊಳಗೆ ಪರೀಕ್ಷಾ ಕೇಂದ್ರಕ್ಕೆ ಕಳುಹಿಸುವುದು. ಅಂಧ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ಬರೆಯುವ ಸಹಾಯಕರು ಸಂಗೀತ ಜ್ಞಾನವುಳ್ಳವರಾಗಿರಬಾರದು. ಕನಿಷ್ಠ 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಪರೀಕ್ಷಾ ಸಹಾಯಕರಾಗಿ ಪರೀಕ್ಷೆ ಬರೆಯಲು ಒಪ್ಪಿಗೆ ಪತ್ರ ನೀಡಬೇಕು. ಅಲ್ಲದೆ ಸಹಾಯಕರ ಒಂದು ಪಾಸ್‌ಪೋರ್ಟ್ ಸೈಜ್ ಅಳತೆಯ ಭಾವಚಿತ್ರವನ್ನು ಒಪ್ಪಿಗೆಯ ಪತ್ರದೊಂದಿಗೆ ಲಗತ್ತಿಸಿ, ಎಸ್.ಎಸ್.ಎಲ್.ಸಿ ಅಂಕಪಟ್ಟಿ ಪ್ರತಿ ಸಮೇತ ಎಲ್ಲಾ ವಿವರಗಳನ್ನು ಪರೀಕ್ಷಾ ಕೇಂದ್ರದ ಅಧೀಕ್ಷರಿಗೆ ಸಲ್ಲಿಸಬೇಕು. ಈ ಎಲ್ಲಾ ಮಾಹಿತಿಯ ಒಂದು ಪ್ರತಿಯನ್ನು ಪರೀಕ್ಷಾ ಕೇಂದ್ರದಲ್ಲಿ ಕಾಯ್ದಿರಿಸಿಕೊಳ್ಳುವುದು.

- ಪರೀಕ್ಷಾ ಕೇಂದ್ರದ ಮುಖ್ಯಸ್ಥರು ವಿದ್ಯಾರ್ಥಿಗಳು ಸಲ್ಲಿಸುವ ದಾಖಲೆಗಳನ್ನು ಪರೀಕ್ಷಾ ಕೇಂದ್ರದಲ್ಲಿಯೇ ಕಾಯ್ದಿರಿಸುವುದು.

- ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಯಾವುದೇ ಕಾರಣದಿಂದಲೂ ಪ್ರವೇಶಪತ್ರ ಇಲ್ಲದ ವಿದ್ಯಾರ್ಥಿಗಳಿಗೆ ಅವಕಾಶ ನೀಡುವುದಾಗಲೀ ಅಥವಾ ಮಂಡಳಿಯ ಅನುಮತಿ ಇಲ್ಲದೆ ಪರೀಕ್ಷೆ ಬರೆಸುವುದನ್ನು ಕಡ್ಡಾಯವಾಗಿ ನಿಷೇದಿಸಿದೆ.

**ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಪ್ರಕ್ರಿಯೆ ವಿವರವಾದ ಮಾಹಿತಿಯುಳ್ಳ flowchartಅನ್ನು ಮಂಡಳಿಯ ವೈಬ್‌ಸೈಟ್ www.kseeb.kar.nic.in ನಲ್ಲಿ ಲಭ್ಯವಿದೆ.**

ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ಸಂಗೀತ ವಿಭಾಗದ ಶಾಖಾಧಿಕಾರಿಗಳನ್ನು ಸಂಪರ್ಕಿಸುವುದು.

**ಶ್ರೀಮತಿ ಉಮಾರಾಣಿ ,**
**ಸಹಾಯಕ ನಿರ್ದೇಶಕರು,**
**ಸಂಗೀತ ವಿಭಾಗ, 4ನೇ ಮಹಡಿ,**
**ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ,**
**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003.**
**ಮೊಬೈಲ್ ಸಂಖ್ಯೆ: 6363822574**
**ಮಂಡಳಿಯ ದೂರವಾಣಿ ಸಂಖ್ಯೆ ;080–23360109**
**email address:dpioekseeb@gmail.com**

17/2/2020

**[ವಿ.ಸುಮಂಗಲ]**
ನಿರ್ದೇಶಕರು
(ಇತರೆ ಪರೀಕ್ಷೆಗಳು)

14/2/2020

**ಇವರಿಗೆ,**

1. ರಾಜ್ಯದ ಎಲ್ಲಾ ಸಂಗೀತ/ನೃತ್ಯ/ತಾಳವಾದ್ಯ ಪರೀಕ್ಷಾ ಕೇಂದ್ರದ ಮುಖ್ಯಸ್ಥರುಗಳಿಗೆ ಸೂಕ್ತ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಸಂಗೀತ/ನೃತ್ಯ/ತಾಳವಾದ್ಯ ಶಾಲಾ/ಸಂಸ್ಥೆಗಳ ಮುಖ್ಯಸ್ಥರುಗಳಿಗೆ ಸೂಕ್ತ ಕ್ರಮಕ್ಕಾಗಿ.
3. ಹಿರಿಯ ಸಹಾಯಕ ನಿರ್ದೇಶಕರು ಸಂಗೀತ/ನೃತ್ಯ ವಿಭಾಗ ಆಯುಕ್ತರ ಕಛೇರಿ ಬೆಂಗಳೂರು ಇವರಿಗೆ ಮಾಹಿತಿಗಾಗಿ
4. ವಿಭಾಗೀಯ ಅಧೀಕ್ಷಕರು ಬೆಂಗಳೂರು/ಮೈಸೂರು/ಬೆಳಗಾಂ/ಕಲಬುರ್ಗಿ ವಿಭಾಗ ಸಹನಿರ್ದೇಶಕರ ಕಛೇರಿ ಇವರುಗಳಿಗೆ ಮಾಹಿತಿಗಾಗಿ.
5. ಹಿರಿಯ ಸಹಾಯಕ ನಿರ್ದೇಶಕರು ಗಣಕಶಾಖೆ ಇವರಿಗೆ ಅಂತರ್‌ಜಾಲದಲ್ಲಿ ಪ್ರಕಟಿಸಲು ಮತ್ತು ಮುಂದಿನ ಕ್ರಮಕ್ಕಾಗಿ.
6. ಕಛೇರಿ ಪ್ರತಿ.

**ಪ್ರತಿಯನ್ನು ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.**

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢ) ಶಿಕ್ಷಣ ಇಲಾಖೆ ಬಹುಮಹಡಿಗಳ ಕಟ್ಟಡ ಬೆಂಗಳೂರು.
2. ಮಾನ್ಯ ಆಯುಕ್ತರು ಹಾಗೂ ಅಧ್ಯಕ್ಷರು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲೆಗಳ ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಇವರಿಗೆ ಕಳುಹಿಸುತ್ತಾ ಸಂಬಂಧಿಸಿದ ನೋಡಲ್ ಅಧಿಕಾರಿಗಳಿಗೆ ಪರೀಕ್ಷಾ ಕಾರ್ಯದ ಉಸ್ತುವಾರಿವಹಿಸಲು ನೇಮಿಸಲು ತಿಳಿಸಿದೆ.